# ಆಹಾ ಸುದ್ದಿ!

★ ಸಸಿತೋಟ



ಶಾಂಘೈನ ಸ್ವಿಸ್ ಪೀಠೋಪಕರಣದ ಅಂಗಡಿಯಲ್ಲಿ ಮಾರಾಟಕ್ಕಿರುವ ಸೋಫಾದಲ್ಲಿ ಕೂರಬಹುದು, ಮಲಗಬಹುದು, ಡೈನಿಂಗ್ ಟೇಬಲ್‌ನಲ್ಲಿ ಮನೆಯಿಂದ ತಂದ ಊಟ– ತಿಂಡಿ ಕೂಡಾ ಮಾಡಬಹುದಂತೆ. ಮಾಲೀಕರಿಗೆ ಇದೆಲ್ಲಾ ಓಕೆ. ದೂರದೃಷ್ಟಿ ಇಟ್ಟುಕೊಂಡಿರುವಾಗ ಇದೆಲ್ಲಾ ಯಾಕೆ?



ಕೆನಡಾದ ಮನೆಯೊಂದರ ಹೊರಗೆ ಲಕ್ಷಾಂತರ ಸಂಖ್ಯೆಯಲ್ಲಿ ಮಿಡತೆಗಳು ಪಟ್ಟಾಗಿ ಕೂತುಬಿಟ್ಟಿವೆಯಂತೆ. ಮನೆಯಾಕೆ ಹೇಗಪ್ಪಾ ಇವುಗಳ ಕಾಟದಿಂದ ತಪ್ಪಿಸಿಕೊಳ್ಳುವುದು ಎಂದು ಸಲಹೆಗಾಗಿ ಅಂತರ್ಜಾಲದಲ್ಲಿ ಹಾಕಿದ್ದಾಳಂತೆ. ಅಡುಗೆ ಮನೆ ಬಾಗಿಲು ತೆರೆದರೆ ಅವು ರೆಸಿಪಿಯಾಗಿ ಕೂರುತ್ತವೆ ಎಂಬ ಸಲಹೆ ಯಾರಿಂದಾದರೂ ಬರಬಹುದು ಎಂದು ಕಾಯುತ್ತಿರಬಹುದು ಮನೆಯಾಕೆ.



ಚೀನಾದ 7 ವರ್ಷದ ಈ ಬಾಲಕ ಚೆನ್ ಯಿ ಈಗಾಗಲೇ ಎಂಟರ ಪ್ಯಾಕ್ ಬೆಳೆಸಿಕೊಂಡು ಬೀಗುತ್ತಿದ್ದಾನೆ. ಜಿಮ್ನಾಸ್ಟಿಕ್‌ನಲ್ಲಿ ಮಿಂಚುತ್ತಿರುವ ಈ ಬಾಲಕನಿಗೆ ಈಗಲೇ ಇದೆಲ್ಲ ಯಾಕೆ ಎಂದು ಹಲವರು ಅಂತರ್ಜಾಲದಲ್ಲಿ ಆತಂಕ ವ್ಯಕ್ತಪಡಿಸಿದ್ದಾರಂತೆ. 7ರ ಬಾಲಕನಿಗೇಕೆ 8ರ ಪ್ಯಾಕ್ ಮೇಲೆ ಮೋಹ? ಹೌದಲ್ಲ!

ಇಂಗ್ಲೆಂಡ್‌ನಲ್ಲಿ ಸ್ಮಿತ್ ಎಂಬಾತನಿಗೆ ನಿತ್ಯ ಬಾರ್‌ಗೆ ಹೋಗಿ ಕುಡಿಯುವ ಅಭ್ಯಾಸ. ಆದರೆ ಆ ದಿನ ರಸ್ತೆ ದಾಟುವಾಗ ಸ್ವಾಗತಿಸಿದ್ದು ವೇಗವಾಗಿ ಸಾಗುತ್ತಿದ್ದ ಬಸ್. ಹಿಂದಿನಿಂದ ಗುದ್ದಿದ ಬಸ್ ಆತನನ್ನು 20 ಅಡಿ ದೂರಕ್ಕೆ ಎಸೆಯಿತಂತೆ, ನೇರವಾಗಿ ಬಾರ್ ಬಾಗಿಲಿಗೆ. 20 ಅಡಿಗಳಷ್ಟು ದೂರ ನಡೆಯುವುದು ತಪ್ಪಿತೆಂದು ಸ್ಮಿತ್ ಕೊಡವಿಕೊಂಡು ಬಾರ್‌ಗೆ ಎಂಟ್ರಿ ಕೊಟ್ಟರೆ, ಇತ್ತ ಬಸ್ ಕಂಬವೊಂದಕ್ಕೆ ಡಿಕ್ಕಿ ಹೊಡೆದು ಪೆಟ್ಟು ಮಾಡಿಕೊಂಡು ಗ್ಯಾರೇಜ್ ದಾರಿ ಹಿಡಿಯಿತಂತೆ. ಸ್ಮಿತ್ ಮತ್ತು ಬಾರ್ ಮಧ್ಯೆ ಯಾರೂ ಅಡ್ಡ ಬರಲು ಸಾಧ್ಯವಿಲ್ಲ ಅಲ್ಲವೇ!

ಅಮೆರಿಕದ ಲೈಲಾ ಎಂಬಾಕೆ ಟ್ವಿಟ್ಟರ್‌ನಲ್ಲಿ ಮೂರು ವರ್ಷಗಳ ಹಿಂದೆ ಅಪರಿಚಿತನೊಬ್ಬನನ್ನು ಗೇಲಿ ಮಾಡಲು 'ನೀನು ಮಹಿಳೆಯೋ ಅಥವಾ ಪುರುಷನೋ ಗೊತ್ತಿಲ್ಲ. ಪುರುಷನೇ ಆಗಿದ್ದರೆ ಮದುವೆ ಸಮಾರಂಭಕ್ಕೆ ಹೋಗಲು ನೀನು ನನ್ನ ಬಾಡಿಗೆ ಗಂಡನಾಗುವೆಯಾ?' ಎಂದು ಜೋಕ್ ಹಾಕಿದಳಂತೆ. ಆತನೂ ತಮಾಷೆಯಾಗೇ 'ಸೂಟ್ ಕೂಡಾ ಸಿದ್ಧವಾಗಿಟ್ಟುಕೊಂಡಿದ್ದೇನೆ' ಎಂದು ಟ್ವೀಟ್ ಮಾಡಿದ್ದನಂತೆ. ಇದೀಗ ಇಬ್ಬರೂ ಮದುವೆ ಉಂಗುರವನ್ನೂ ಸಿದ್ಧ ಮಾಡಿಕೊಂಡಿದ್ದು, ಆಕೆ 'ಬಾಡಿಗೆ ಮಗು ಇದೆಯಾ?' ಎಂದು ಯಾವಾಗ ಟ್ವೀಟ್ ಮಾಡುತ್ತಾಳೋ!



ಚಾಂಗ್‌ಕಿಂಗ್‌ನಲ್ಲಿ ಕಟ್ಟಡದ ಮೇಲೆ ಜೋಡಿ ಮಾರ್ಗದ ರಸ್ತೆಯೊಂದು ಹಾದುಹೋಗಿದೆ. ರಸ್ತೆಯ ಪಕ್ಕ ಅಂಗಡಿಗಳು, ಮರಗಳು ಕೂಡಾ ಇವೆಯಂತೆ. ಕಟ್ಟಡದ ನಿವಾಸಿಗಳಿಗೆ ಶಬ್ದ ಮಾಲಿನ್ಯವೆಂದಿರಾ? ರಸ್ತೆಯ ಕೆಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆ ಎಂತಯ್ಯ ಅಲ್ಲವೇ!